# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 239 |
| ಸದಸ್ಯರ ಹೆಸರು | : | ಶ್ರೀ.ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 06.12.2023 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಳಗಾವಿ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾಲಯ & ಆಸ್ಪತ್ರೆಗಳ ಸಂಖ್ಯೆ ಎಷ್ಟು; ಹಾಗೂ ಈ ಆಸ್ಪತ್ರೆಗಳಿಗೆ ಅವಶ್ಯಕತೆಗನುಸಾರ ಸರ್ಮಪಕ ಪಶುವೈದ್ಯಾಧಿಕಾರಿಗಳನ್ನು ಮತ್ತು ಇತರೆ ಸಿಬ್ಬಂದಿಗಳನ್ನು ಕರ್ತವ್ಯ ನಿರ್ವಹಣೆಗೆ ನಿಯೋಜಿಸಲಾಗಿದೆಯೇ?</td><td>ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 274 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಪಶುವೈದ್ಯ ಸಂಸ್ಥೆಗಳ ವಿವರ</th><th>ಒಟ್ಟು ಸಂಖ್ಯೆ</th></tr>
<tr><td>01</td><td>ಸ್ಪೆಷಾಲಿಟಿ ಪಶುಆಸ್ಪತ್ರೆ,</td><td>01</td></tr>
<tr><td>02</td><td>ಪಾಲಿಕ್ಲಿನಿಕ್</td><td>01</td></tr>
<tr><td>03</td><td>ಪಶುಆಸ್ಪತ್ರೆ</td><td>37</td></tr>
<tr><td>04</td><td>ಪಶುಚಿಕಿತ್ಸಾಲಯ</td><td>157</td></tr>
<tr><td>05</td><td>ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ</td><td>68</td></tr>
<tr><td>06</td><td>ಸಂಚಾರಿ ಪಶುಚಿಕಿತ್ಸಾಲಯ</td><td>10</td></tr>
<tr><td></td><td>ಒಟ್ಟು</td><td>274</td></tr>
</table>
ಪಶುವೈದ್ಯರ ಖಾಲಿ ಹುದ್ದೆಗಳಿಗೆ ಅಧಿಕ ಪ್ರಭಾರ ವ್ಯವಸ್ಥೆ ಮಾಡಿ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಸೇವೆ ನೀಡಲು ಕ್ರಮವಹಿಸಲಾಗಿದೆ.<br><br>ಕಛೇರಿ ಆದೇಶ ಸಂಖ್ಯೆ: ಆಪಸಂ: ಸಿಬ್ಬಂದಿ; ಡಿ-1:ವಿವ-02; 2022-23 ದಿನಾಂಕ:20-10-2023 ರಂತೆ ಬೆಳಗಾವಿ ಜಿಲ್ಲೆಗೆ 03 ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯನ್ನು ಭರ್ತಿ ಮಾಡಲಾಗಿದೆ.<br><br>ಬೆಳಗಾವಿ ಜಿಲ್ಲೆಯಲ್ಲಿ ಖಾಲಿ ಇರುವ ‘ಡಿ’ ದರ್ಜೆ ಹುದ್ದೆಗಳಿಗೆದುರಾಗಿ 135 ‘ಡಿ’ ದರ್ಜೆ ಹುದ್ದೆಗಳನ್ನು ಹಾಗೂ ಖಾಲಿ ಇರುವ ವಾಹನ ಚಾಲಕರ ಖಾಲಿ ಹುದ್ದೆಗಳಿಗೆದುರಾಗಿ 09 ವಾಹನ ಚಾಲಕರ ಹುದ್ದೆಗಳನ್ನು ಬಾಹ್ಯಸಂಪನ್ಮೂಲ ಸಂಸ್ಥೆಗಳಿಂದ ಸೇವೆಯನ್ನು ಪಡೆಯಲಾಗಿದೆ.</td></tr>
</table>

| | | |
|---|---|---|
| | | ಪಶು ವೈದ್ಯಕೀಯ ಸಂಸ್ಥೆವಾರು ಹುದ್ದೆಗಳ ವಿವರವಾದ ಮಾಹಿತಿಯನ್ನು **<u>ಅನುಬಂಧ-1</u>** ರಲ್ಲಿ ಲಗತ್ತಿಸಿದೆ. |
| ಆ) | ಪಶು ಸಂಗೋಪನೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು | ಪಶು ಸಂಗೋಪನೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ.<br>1. ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ರೂ.5/- ರಂತೆ ಪ್ರೋತ್ಸಾಹಧನ ನೀಡುವ ಯೋಜನೆ.<br>2. ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾಗುವ ಅನುದಾನದಲ್ಲಿ ಒಂದು ಮಿಶ್ರತಳಿ ಹಸು ಘಟಕವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿತರಿಸುವ ಯೋಜನೆ.<br>3. ರಾಜ್ಯದಲ್ಲಿ ಗುರುತಿಸಲ್ಪಟ್ಟ ಸಾಂಕ್ರಾಮಿಕ ರೋಗಗಳಾದ ಕಾಲುಬಾಯಿ ಜ್ವರ, ಪಿಪಿಆರ್, ಕರುಳುಬೇನೆ, ಹಂದಿ ಜ್ವರ, ಚರ್ಮಗಂಟು ರೋಗ, ಗಳಲೇ ರೋಗ ಕಂದು ರೋಗ ಮತ್ತು ನಾಯಿ ಹುಚ್ಚುರೋಗದ ವಿರುದ್ಧ ಲಸಿಕೆ ಹಾಕುವ ಯೋಜನೆ.<br>4. ಚರ್ಮಗಂಟು ರೋಗದಿಂದ ಮರಣ ಹೊಂದಿದ ರಾಸುಗಳಿಗೆ ಅವುಗಳ ಮಾಲೀಕರಿಗೆ ಪರಿಹಾರಧನ ವಿತರಿಸುವ ಯೋಜನೆ.<br>5. ರಾಸುಗಳು ಆಕಸ್ಮಿಕ ಮರಣ ಹೊಂದಿದಾಗ ರೈತರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ಆಂಶಿಕವಾಗಿ ಭರಿಸಲು ಮರಣ ಹೊಂದಿದ ದನ, ಎಮ್ಮೆ, ಎತ್ತು, ಹೋರಿ, ಕಡಸು, ಮತ್ತು ಮಣಕಗಳಿಗೆ ರೂ.10,000/- ಪರಿಹಾರಧನವನ್ನು ರಾಸುಗಳ ಮಾಲೀಕರಿಗೆ ವಿತರಿಸುವ ಯೋಜನೆ. |

| | | |
|---|---|---|
| | | 6. ರಾಷ್ಟ್ರೀಯ ಜಾನುವಾರು ಮಿಷನ್ (ಕೇಂದ್ರ ಪುರಸ್ಕೃತ ಯೋಜನೆ) ಯಡಿ ಜಾನುವಾರುಗಳಿಗೆ ವಿಮಾ ಸೌಲಭ್ಯ ಒದಗಿಸುವ ಯೋಜನೆ.<br><br>7. ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ ಆರ್.ಕೆ.ವಿ.ವೈ. ಯೋಜನೆಯಡಿ ಕೃಷಿ ಕೂಲಿ ಕಾರ್ಮಿಕರಿಗೆ ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತ ರೈತರಿಗೆ ಒಂದು ಮಿಶ್ರ ತಳಿ ಹಾಲು ಕರೆಯುವ ಹಸು ಘಟಕದ ವಿತರಣೆ ಯೋಜನೆ.<br><br>8. ಸಣ್ಣ ಪ್ರಾಣಿಗಳ ಆಕಸ್ಮಿಕ ಸಾವಿಗೆ ಆಪತ್ತು ನಿಧಿ ಯೋಜನೆಯಡಿ ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ /ಮೇಕೆ ಗೆ ರೂ. 5000/- ಪರಿಹಾರ ಧನ ಹಾಗೂ 3-6 ತಿಂಗಳ ವಯಸ್ಸಿನ ಕುರಿ ಮತ್ತು ಮೇಕೆಗಳ ಆಕಸ್ಮಿಕ ಮರಣಕ್ಕೆ ರೂ. 3500/- ಪರಿಹಾರ ಧನ ಒದಗಿಸುವ ಯೋಜನೆ.<br><br>9. ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ ಶೇ. 90 ರ ಸಹಾಯಧನದೊಂದಿಗೆ 6+1 ಕುರಿ/ಮೇಕೆ ಘಟಕ ವಿತರಿಸುವ ಯೋಜನೆ.<br><br>10. ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರುಗಳಿಗೆ 20+1 ಕುರಿ/ಮೇಕೆ ಘಟಕಗಳನ್ನು ಒದಗಿಸುವ ಯೋಜನೆ. |

| | | |
|---|---|---|
| | | 11. ರಾಜ್ಯದಲ್ಲಿರುವ 4234 ಪಶುವೈದ್ಯಕೀಯ ಸಂಸ್ಥೆಗಳಲ್ಲಿ ದನ ಮತ್ತು ಎಮ್ಮೆಗಳಿಗೆ ರೋಗ ತಪಾಸಣೆ, ಸೂಕ್ತ ಚಿಕಿತ್ಸೆ ಮತ್ತು ಕೃತಕ ಗರ್ಭಧಾರಣೆ ಸೌಲಭ್ಯ ಒದಗಿಸಲಾಗುತ್ತಿದೆ.<br><br>12. ರಾಷ್ಟ್ರೀಯ ಕೃತಕ ಗರ್ಭಧಾರಣಾ ಯೋಜನೆಯಡಿಯಲ್ಲಿ ಶೇ.50 ಕ್ಕಿಂತ ಕಡಿಮೆ ಕೃತಕ ಗೃಭಧಾರಣೆ ಪ್ರಗತಿಯಾಗಿರುವ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಉಚಿತವಾಗಿ ಉತ್ಕೃಷ್ಠ ತಳಿಗಳ ವೀರ್ಯ ನಳಿಕೆಗಳನ್ನು ಉಪಯೋಗಿಸಿ ರೈತರ ಮನೆ ಬಾಗಿಲಿಗೆ ಹೋಗಿ ಕೃತಕ ಗರ್ಭಧಾರಣೆ ಸೌಲಭ್ಯ ಯೋಜನೆ.<br><br>13. ವಿಸ್ತರಣಾ ಘಟಕಗಳ ಬಲಪಡಿಸುವಿಕೆಯಡಿ ಮಿಶ್ರತಳಿ ಕರುಗಳ/ ಜಾನುವಾರು ಪ್ರದರ್ಶನ, ಹಾಲು ಕರೆಯುವ ಸ್ಪರ್ದೆ, ಪ್ರಾಣಿ ಜನ್ಯ ರೋಗಗಳ ಜಾಗೃತಿ ಶಿಬಿರ ರೈತರ ತರಬೇತಿ ಮತ್ತು ಪ್ರವಾಸ, ಜಿಲ್ಲಾ ಮಟ್ಟದ ಪಶುಮೇಳ, ಜಾನುವಾರು ಜಾತ್ರೆ, ತಾಂತ್ರಿಕ ಸಂಕಿರಣ, ಏರ್ಪಡಿಸಲಾಗುವುದು.<br><br>14. ಉಚಿತ ಜಾನುವಾರು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಾನುವಾರುಗಳ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ.<br><br>15. ರೈತರ ಮನೆಬಾಗಿಲಿಗೆ ತುರ್ತು ಪಶುವೈದ್ಯಕೀಯ ಸೇವೆಯನ್ನು ನೀಡಲು 290 ಸುಸಜ್ಜಿತ ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ಒದಗಿಸಲಾಗಿರುತ್ತದೆ. ಜಾನುವಾರು ಚಿಕಿತ್ಸೆ ಅಗತ್ಯವಿರುವ ಜಾನುವಾರು ಮಾಲೀಕರು ಸಹಾಯವಾಣಿ ಸಂಖ್ಯೆ 1962 ಕ್ಕೆ ಕರೆ ಮಾಡಿ ಅಗತ್ಯ ಸೇವೆಗಳನ್ನು ಪಡೆಯಬಹುದಾಗಿದೆ.<br><br>16. ಜಾನುವಾರುಗಳಿಗೆ 24/7 ನಿರಂತರ ಸೇವೆಯನ್ನು ಒದಗಿಸಲು ಪ್ರಾಣಿ ಕಲ್ಯಾಣ ಸಹಾಯವಾಣಿ ಸಂಖ್ಯೆ 8277100200 ಯನ್ನು ಕಲ್ಪಿಸಲಾಗಿದ್ದು ರೈತರು ಸಹಾಯವಾಣಿಯನ್ನು ಸಂಪರ್ಕಿಸಿ ಇಲಾಖೆಯ ತಾಂತ್ರಿಕ ಸೇವೆ ಪಡೆಯಬಹುದಾಗಿದೆ. |

| | | |
|---|---|---|
| ಇ) | ಪಶು ಸಂಗೋಪನಾ ಇಲಾಖೆಯ ಕಾರ್ಯಕ್ರಮಗಳಿಗೆ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆಯಾದ ಅನುದಾನವೆಷ್ಟು ಮತ್ತು ಖರ್ಚಾದ ಅನುದಾನವೆಷ್ಟು? | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆಯಾದ ಅನುದಾನ ಮತ್ತು ಖರ್ಚಾದ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಸಂ: ಪಸಂಮೀ ಇ-133 ಪಸಸೇ 2023**

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಅನುಬಂಧ-2

## ಅನುಬಂಧ

ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಪ್ರಶ್ನೆ ಸಂಖ್ಯೆ226(239)

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆಯಾದ ಅನುದಾನ ಮತ್ತು ಖರ್ಚಾದ ಅನುದಾನದ ವಿವರ

( ರೂ. ಕೋಟಿಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | 2020-21 | | 2021-22 | | 2022-23 | |
|---|---|---|---|---|---|---|---|
| | | ಹಂಚಿಕೆ ಯಾದ ಅನುದಾನ | ಖರ್ಚಾದ ಅನುದಾನ | ಹಂಚಿಕೆ ಯಾದ ಅನುದಾನ | ಖರ್ಚಾದ ಅನುದಾನ | ಹಂಚಿಕೆ ಯಾದ ಅನುದಾನ | ಖರ್ಚಾದ ಅನುದಾನ |
| | ರಾಜ್ಯವಲಯ ಕಾರ್ಯಕ್ರಮಗಳು | | | | | | |
| 1 | 2403-00-001-0-01 ಪಶುಸಂಗೋಪನೆ ಮತ್ತು ಪಶುವೈದ್ಯಸೇವೆಗಳ ನಿರ್ದೇಶಕರು | 90.24 | 87.94 | 88.95 | 88.36 | 162.97 | 161.37 |
| 2 | 2403-00-001-0-04 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 0.00 | 0.00 | 1.80 | 1.79 | 0.74 | 0.74 |
| 3 | 2403-00-101-0-06 ಪಶು ಆರೋಗ್ಯ ಸಂಸ್ಥೆ ಮತ್ತು ಪಶುವೈದ್ಯಕೀಯ ಜೈವಿಕ ಮತ್ತು ಚಿಕಿತ್ಸಕ ಪ್ರಯೋಗ ಶಾಲೆ,ಬೆಂಗಳೂರು. | 18.66 | 18.66 | 40.12 | 38.03 | 23.78 | 23.77 |
| 4 | 2403-00-101-0-21 ರಾಜ್ಯದ ಪಾಲು ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ 60:ರಾಜ್ಯ 40) | 48.70 | 45.91 | 11.61 | 10.80 | 5.30 | 5.30 |
| 5 | 2403-00-101-0-42 ಕೇಂದ್ರದ ಪಾಲು ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ-60 :: ರಾಜ್ಯ: 40) | 0.00 | 0.00 | 0.00 | 0.00 | 4.66 | 4.66 |
| 6 | 2403-00-102-1-06 ಜಾನುವಾರು ಸಂವರ್ಧನಾ ಕ್ಷೇತ್ರಗಳು ಮತ್ತು ತರಬೇತಿ ಕೇಂದ್ರಗಳು | 46.35 | 43.67 | 48.51 | 47.86 | 0.00 | 0.00 |

| | | | | | | | |
|---|---|---|---|---|---|---|---|
| 7 | 2403-00-102-2-40 ಪಿಂಜ್ರಾಪೋಲ್ ಮತ್ತು ಗೋಶಾಲೆಗಳಿಗೆ ನೆರವು | 4.11 | 4.09 | 19.11 | 19.11 | 38.11 | 38.11 |
| 8 | 2403-00-103-0-01 ರಾಜ್ಯ ಕುಕ್ಕುಟ ಸಾಕಣೆ ಕ್ಷೇತ್ರಗಳು | 8.02 | 7.41 | 7.23 | 6.46 | 3.56 | 3.35 |
| 9 | 2403-00-104-0-02 ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ | 16.86 | 16.86 | 18.55 | 18.55 | 17.12 | 16.76 |
| 10 | 2403-00-104-0-12 ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ | 39.18 | 39.18 | 20.30 | 20.30 | 0.00 | 0.00 |
| 11 | 2403-00-105-0-01 ಹಂದಿ ಸಂವರ್ಧನಾ ಕ್ಷೇತ್ರಗಳು | 1.82 | 1.45 | 2.19 | 1.66 | 0.00 | 0.00 |
| 12 | 2403-00-106-0-03 (ಕೇಂದ್ರದ ಪಾಲು) ರಾಷ್ಟ್ರೀಯ ಜಾನುವಾರು ಮಿಷನ್ | 6.45 | 6.45 | 9.70 | 9.70 | 0.00 | 0.00 |
| 13 | 2403-00-106-0-04 (ರಾಜ್ಯದ ಪಾಲು) ರಾಷ್ಟ್ರೀಯ ಜಾನುವಾರು ಮಿಷನ್ | 0.00 | 0.00 | 4.70 | 4.70 | 0.00 | 0.00 |
| 14 | 240-00-109-0-01 ಪಶುವೈದ್ಯಕೀಯ ಶಿಕ್ಷಣ ಮತ್ತು ತರಬೇತಿ | 4.12 | 3.51 | 4.20 | 3.71 | 0.00 | 0.00 |
| 15 | 2403-00-113-0-01 ಪಶುಸಂಗೋಪನೆಯ ಸಂಖ್ಯಾ ಸಂಗ್ರಹ | 3.46 | 2.83 | 3.47 | 2.96 | 3.33 | 3.13 |
| 16 | 2403-00-113-0-02 (ರಾಜ್ಯದ ಪಾಲು) ಮಾದರಿ ಸಮೀಕ್ಷೆ ಯೋಜನೆ, ಹಾಲು, ಮಾಂಸ,ಮೊಟ್ಟೆ ಮತ್ತು ಉಣ್ಣೆ ಉತ್ಪನ್ನಗಳು | 3.96 | 3.61 | 3.78 | 3.68 | 4.10 | 3.57 |
| 17 | 2403-00-113-0-04 ಜಾನುವಾರು ಗಣತಿ(ಕೇಂದ್ರ :100%) | 0.99 | 0.99 | 0.27 | 0.27 | 0.00 | 0.00 |

| | | | | | | | |
|---|---|---|---|---|---|---|---|
| 18 | **2403-00-113-0-07** (ಕೇಂದ್ರದ ಪಾಲು) ಮಾದರಿ ಸಮೀಕ್ಷೆ ಯೋಜನೆ, ಹಾಲು, ಮಾಂಸ,ಮೊಟ್ಟೆ ಮತ್ತು ಉಣ್ಣೆ ಉತ್ಪನ್ನಗಳು | 0.00 | 0.00 | 0.28 | 0.28 | 0.23 | 0.00 |
| 19 | **2403-00-113-0-0-06** ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆ | 120.88 | 120.88 | 134.17 | 123.06 | 134.61 | 134.59 |
| 20 | **2403-00-195-0-01** ಪಶು ಸಂಗೋಪನೆ ಸಹಕಾರಿ ಸಂಘಗಳಿಗೆ ಅನುದಾನಗಳು | 0.00 | 0.00 | 2.50 | 2.50 | 2.50 | 2.50 |
| 21 | **2404-00-191-1-17** ಹಾಲು ಉತ್ಪಾದಕರಿಗೆ ಉತ್ತೇಜನ | 1187.00 | 1185.86 | 1403.00 | 1402.96 | 1216.51 | 1216.51 |
| 22 | **4403-00-101-0-02** ಆರ್.ಐ.ಡಿ.ಎಫ್ ಯೋಜನೆಯಡಿ ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡ ನಿರ್ಮಾಣ | 72.29 | 72.29 | 63.74 | 63.74 | 15.86 | 15.79 |
| 23 | **4403-00-101-0-11** ಶಿಕ್ಷಣ, ವಿಸ್ತರಣೆ ಮತ್ತು ಸಂಶೋಧನೆ ಕೆ.ವಿ.ಎ.ಎಫ್.ಎಸ್.ಯು. ಬೀದರ್ | 10.00 | 10.00 | 53.37 | 53.37 | 52.00 | 52.00 |
| 24 | **4403-00-102-1-03** ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ | 7.00 | 7.00 | 4.69 | 4.69 | 0.00 | 0.00 |
| 25 | **4403-00-800-0-05** ಮೆಗಾ ಡೈರಿ ಸ್ಥಾಪನೆ | 0.00 | 0.00 | 0.00 | 0.00 | 60.00 | 60.00 |
| 26 | **2403-00-101-0-26** ಕಾರ್ಯಕಾರಿ ಸಿಬ್ಬಂದಿ | 80.50 | 68.80 | 73.89 | 73.01 | 92.30 | 86.77 |
| 27 | **2403-00-101-0-27** ಔಷಧಿಗಳು ಮತ್ತು ರಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು | 35.00 | 34.97 | 39.17 | 39.09 | 54.39 | 54.38 |

| | | | | | | | |
|---|---|---|---|---|---|---|---|
| 28 | 2403-00-101-0-28 ಕಟ್ಟಡಗಳ ನಿರ್ವಹಣೆ | 16.35 | 16.18 | 16.35 | 16.05 | 22.25 | 22.00 |
| 29 | 2403-00-101-0-30 ವಿಸ್ತರಣಾ ಘಟಕಗಳ ಬಲಪಡಿಸುವಿಕೆ | 5.00 | 4.98 | 5.00 | 4.99 | 7.36 | 7.36 |
| 30 | 2403-00-101-32 ಜಾನವಾರು ತಳಿ ಸಂವರ್ಧನಾ ಕೇಂದ್ರ | 0.01 | 0.01 | 0.01 | 0.01 | 0.00 | 0.00 |
| 31 | 2403-00-101-0-61 ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಮತ್ತು ಅವುಗಳನ್ನು ತಾಲ್ಲೂಕು ಮಟ್ಟದ ಔಷಧಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವುದು | 605.59 | 548.91 | 606.89 | 571.51 | 637.99 | 598.71 |
| 32 | 2403-00-101-0-63 ಜೀವ ವೈದ್ಯ ತ್ಯಾಜ್ಯ ವಸ್ತುಗಳ ವಿಲೇವಾರಿ | 2.26 | 2.25 | 2.26 | 2.25 | 0.00 | 0.00 |
| 33 | 2403-00-101-0-64 ಗೊಡ್ಡು ಬಂಜೆ ಜಾನುವಾರು ಶಿಬಿರಗಳ ವ್ಯವಸ್ಥೆ | 6.02 | 5.97 | 6.54 | 6.53 | 0.00 | 0.00 |
| | ಒಟ್ಟು | **2440.82** | **2360.66** | **2696.35** | **2641.98** | **2559.69** | **2511.35** |